6

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3007/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 02/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ವಿತಲ ಶೆಟ್ಟಿ ತಂದೆ ದಿ: ಸಂಕಯ್ಯ ಶೆಟ್ಟಿ, ನರ್‌ನಾಡು, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ವಿಠ್ಠಲ ಶೆಟ್ಟಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ತಾಲ್ಲೂಕಿನ ಉಪ್ಪೂರು ಗ್ರಾಮದ ಸರ್ವೇ ನಂ.318/8ರ 0.20 ಎಕರೆ ಜಮೀನು ಶ್ರೀಮತಿ ಲಕ್ಷ್ಮೀ ಆಚಾರ್ಯ ಎನ್ನುವವರಿಗೆ ಸೇರಿರುತ್ತದೆ. ಇವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಹಾಗೂ ಪಂಚಾಯತಿಯಿಂದ ಪರವಾನಗಿಯನ್ನು ಪಡೆಯದೆ ಸರ್ವೇ ನಂ.318/8 ರಲ್ಲಿ ಆವರಣ ಗೋಡೆ ಕಟ್ಟಿರುತ್ತಾರೆ. ಈ ಬಗ್ಗೆ ಎದುರುದಾರರಿಗೆ ಮೌಖಿಕವಾಗಿ ಕ್ರಮ ಜರುಗಿಸುವಂತೆ ಕೋರಿದ್ದರೂ, ಇದುವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಬದಲಾಗಿ ಆವರಣ ಗೋಡೆ ಕಟ್ಟಿಸಲು ಶ್ರೀಮತಿ ಲಕ್ಷ್ಮೀ ಆಚಾರ್ಯ ಇವರಿಗೆ ಸಹಕರಿಸಿರುತ್ತಾರೆ. ಆದ್ದರಿಂದ, ಸರ್ಕಾರಿ ರಸ್ತೆ ಅತಿಕ್ರಮಣವನ್ನು ತೆರವುಗೊಳಿಸಲು ಹಾಗೂ ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಲಕ್ಷ್ಮೀ ಆಚಾರ್ತಿ ಕೋಂ ಗಣೇಶ ಆಚಾರ್ಯರವರು ತಮ್ಮ ಆಸ್ತಿಯಾದ ಸರ್ವೇ ನಂ.318/8ರ 0.20 ಎಕರೆ ಸ್ಥಳದಲ್ಲಿ ಹಿಂದೆಯೇ ಆವರಣ ಗೋಡೆ ರಚಿಸಿದ್ದು, ಅದು ತಮ್ಮ ಗಮನಕ್ಕೆ ಬಂದಿರಲಿಲ್ಲ. ಸದರಿ ಆವರಣ ಗೋಡೆ ಕಟ್ಟುವ ಸಲುವಾಗಿ ಪಂಚಾಯತಿ ವತಿಯಿಂದ ಅನುಮತಿ ಪಡೆದಿಲ್ಲ. ಶ್ರೀ ವಿಠ್ಠಲ ಶೆಟ್ಟಿ ಅಂದರೆ ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿಯನ್ನು ಸಲ್ಲಿಸಿ, ಶ್ರೀಮತಿ ಲಕ್ಷ್ಮೀ ಆಚಾರ್ತಿ ಇವರು ಈಗಾಗಲೇ ನಿರ್ಮಿಸಿದ ಆವರಣ ಗೋಡೆಗೆ ಸಂಬಂಧಿಸಿದ ಪಂಚಾಯತಿಯ ನಿರ್ಣಯ ಪ್ರತಿ, ಲೈಸನ್ಸ್ ಪ್ರತಿ ಮತ್ತು ನಕ್ಷೆಯ ಪ್ರತಿಯನ್ನು ಕೋರಿದಾಗ, ಶ್ರೀಮತಿ ಲಕ್ಷ್ಮೀ ಆಚಾರ್ತಿ ಆವರಣೆ ಗೋಡೆ ನಿರ್ಮಿಸಿರುತ್ತಾರೆಂಬುದು ತನ್ನ ಗಮನಕ್ಕೆ ಬಂದಿರುತ್ತದೆ ಎಂದು ಆದ್ದರಿಂದ, ಆವರಣ ಗೋಡೆ ರಚಿಸಲು ತಾನು ಶ್ರೀಮತಿ ಲಕ್ಷ್ಮೀ

ಆಚಾರ್ತಿಯವರಿಗೆ ಸಹಕರಿಸಿರುತ್ತೇನೆಂದು ಹೇಳುವುದು ತೀರಾ ಸುಳ್ಳಿನ ಸಂಗತಿಯಾಗಿರುತ್ತದೆ. ಇದಲ್ಲದೇ, ಸದರಿಯವರು ಆವರಣ ಗೋಡೆ ರಚಿಸುವಾಗ ರಸ್ತೆಯನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟುತ್ತಿರುತ್ತಾರೆ, ಈ ಬಗ್ಗೆ ಕಾಮಗಾರಿಯನ್ನು ನಿಲ್ಲಿಸುವಂತೆ ತನಗೆ ಮೌಖಿಕವಾಗಿ ದೂರುದಾರರು ಆಕ್ಷೇಪ ನೀಡಿದ್ದರೂ ಎಂಬುದು ಸಹ ಸುಳ್ಳಿನ ಸಂಗತಿಯಾಗಿರುತ್ತದೆ. ಇದಲ್ಲದೇ, ಸದರಿ ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ಕಟ್ಟಿರುವ ಆವರಣ ಗೋಡೆಯನ್ನು ಏಕಾಏಕಿ ಒಡೆಯಲು ಬರುವುದಿಲ್ಲ. ಸಾರ್ವಜನಿಕ ರಸ್ತೆ ಅತಿಕ್ರಮಣದ ಬಗ್ಗೆ ತಾಲ್ಲೂಕು ಸರ್ವೇಯರ್ ಮೂಲಕ ಅಳತೆ ಮಾಡಿಸಿ ವರದಿ ಪಡೆಯಲು ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರವರಿಗೆ ಸರ್ವೇಯರ್ ಅನ್ನು ನಿಯೋಜಿಸಲು ಕೋರಿ ಪತ್ರ ಬರೆಯಲಾಗಿರುತ್ತದೆ. ಇದಕ್ಕೆ ಉತ್ತರವಾಗಿ ವಿಶೇಷ ತಹಶೀಲ್ದಾರ್‌ರವರು ಮೋಜಣಿ ತಂತ್ರಾಂಶದಲ್ಲಿ ಸ್ಥಳದ ಮಾಲೀಕರೆ ಅರ್ಜಿ ಸಲ್ಲಿಸಿ ಸರ್ವೇ ಕಾರ್ಯಕ್ಕೆ ಕೋರಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ, ಸರ್ವೇ ನಂ.318/8ರ 0.20 ಎಕರೆ ಸ್ಥಳದ ಸರ್ವೇ ಕಾರ್ಯಕ್ಕೆ ಸದರಿ ಭೂ ಮಾಲೀಕರೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಿದ್ದ ಕಾರಣ, ತಹಶೀಲ್ದಾರ್‌ರವರಿಂದ ಬಂದ ಪತ್ರದ ಪ್ರತಿಯೊಂದಿಗೆ ಶ್ರೀಮತಿ ಲಕ್ಷ್ಮೀ ಆಚಾರ್ತಿಯವರಿಗೆ ಪತ್ರ ಬರೆದು, ಸರ್ವೇ ಕಾರ್ಯಕ್ಕೆ ಕೋರಿ ತಹಶೀಲ್ದಾರ್‌ರವರಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿರುತ್ತದೆ. ಸದರಿಯವರಿಂದ ವರದಿ ಬಂದ ನಂತರ ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

3. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ತಿಳಿಸಿರುವಂತೆ ಉಪ್ಪುರು ಗ್ರಾಮದ ಸರ್ವೆ ನಂ. 318/8 ರಲ್ಲಿ ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ಆವರಣ ಗೋಡೆಯನ್ನು ಕಟ್ಟಿದ್ದು, ಸದರಿ ಆವರಣ ಗೋಡೆ ಕಟ್ಟಲು ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ಉಪ್ಪೂರು ಗ್ರಾಮ ಪಂಚಾಯತಿ ವತಿಯಿಂದ ಯಾವುದೇ ಪರವಾನಗಿಯನ್ನು ಪಡೆಯದೇ ಇರುವುದು ದೃಢಪಟ್ಟಿರುತ್ತದೆ. ಈ ಬಗ್ಗೆ ಎದುರುದಾರರ ಆಕ್ಷೇಪಣೆಯಿಂದಲೂ ಸ್ಪಷ್ಟ ಪಡುತ್ತದೆ. ಸದರಿ ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ತಮ್ಮ ಸರ್ವೆನಂ.318/8ರ ಜಮೀನಿನಲ್ಲಿ ಆವರಣ ಗೋಡೆ ಕಟ್ಟಲು ಪರವಾನಗಿಯನ್ನು ಪಡೆಯದೇ, ಆವರಣ ಗೋಡೆ ಕಟ್ಟಿರುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಎದುರುದಾರರಿಗೆ ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿಯನ್ನು ಸಲ್ಲಿಸಿ, ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ಆವರಣ ಗೋಡೆ ರಚಿಸಿರುವ ಬಗ್ಗೆ ಮಾಹಿತಿಯನ್ನು ಕೋರಿದಾಗ, ಎದುರುದಾರರ ಗಮನಕ್ಕೆ ಸದರಿ ಶ್ರೀಮತಿ ಲಕ್ಷ್ಮೀ ಆಚಾರ್ತಿ ಇವರು ಅಕ್ರಮವಾಗಿ ಆವರಣ ಗೋಡೆಯನ್ನು ಕಟ್ಟಿರುವುದು ತಿಳಿದು ಬಂದಿರುತ್ತದೆ. ಅಂದರೇ, ದಿನಾಂಕ 04/05/2015 ರಂದು ದೂರುದಾರರು ಅರ್ಜಿ ಸಲ್ಲಿಸಿದ್ದು, ಅದಕ್ಕೆ ಉತ್ತರವಾಗಿ ದಿನಾಂಕ 23/05/2015 ರಂದು ಮಾಹಿತಿ ಲಭ್ಯವಿಲ್ಲವೆಂದು ಎದುರುದಾರರು

8

ದೂರುದಾರರಿಗೆ ತಿಳಿಸಿ ಪತ್ರ ಬರೆದಿದ್ದು, ಆದ್ದರಿಂದ, ಎದುರುದಾರರಿಗೆ ಶ್ರೀಮತಿ ಲಕ್ಷ್ಮೀ ಆಚಾರ್ತಿ ಇವರು ಅಕ್ರಮವಾಗಿ ಆವರಣ ಗೋಡೆ ಕಟ್ಟುತ್ತಿರುವ ಬಗ್ಗೆ ಎದುರುದಾರರ ಗಮನಕ್ಕೆ ಬಂದಿತ್ತೆಂಬುದು ಸ್ಪಷ್ಟ ಪಡುತ್ತದೆ ಹಾಗೂ ಇದನ್ನು ಎದುರುದಾರರು ಸಹ ಒಪ್ಪಿರುತ್ತಾರೆ. ಹೀಗಿರುವಲ್ಲಿ ಎದುರುದಾರರು ಅಕ್ರಮವಾಗಿ ರಚನೆಯಾಗಿರುವ/ರಚನೆಯಾಗುತ್ತಿದ್ದ ಆವರಣ ಗೋಡೆ ಬಗ್ಗೆ ಸೂಕ್ತ ಕ್ರಮ ಜರುಗಿಸದೇ ಇರುವುದು ಸ್ಪಷ್ಟ ಪಡುತ್ತದೆ.

4. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ:30/05/2016 ರಂದು ಬ್ರಹ್ಮಾವರದ ತಹಶೀಲ್ದಾರ್‌ರವರಿಗೆ ಸರ್ವೇ ನಂ.318/8ರ ಜಾಗದ ಸರ್ವೇ ಮಾಡಲು ಕೋರಿ ಪತ್ರ ಬರೆದಿರುವುದು ಸ್ಪಷ್ಟ ಪಟ್ಟಿರುತ್ತದೆ. ಅಂದರೇ, ದಿನಾಂಕ 23/05/2015 ರಿಂದ 30/05/2016 ರವರೆಗೆ ಎದುರುದಾರರು ಅಕ್ರಮವಾಗಿ ಕಟ್ಟಲಾಗಿರುವ ಆವರಣ ಗೋಡೆ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂಬುದು ಸ್ಪಷ್ಟ ಪಡುತ್ತದೆ. ನಂತರ ಸದರಿ ಭೂಮಿ ಅಳತೆ ಮಾಡುವ ಬಗ್ಗೆ ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರವರಿಗೆ ದಿ:30/05/2016 ರಂದು ಪತ್ರ ಬರೆದಿರುತ್ತೇನೆಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಎದುರುದಾರರು ಮೇಲೆ ತಿಳಿಸಿದಂತೆ ದಿನಾಂಕ 30/05/2016ರ ಪೂರ್ವದಲ್ಲಿ ಎದುರುದಾರರು ರಸ್ತೆ ಅತಿಕ್ರಮಣದ ದೂರಿನ ಬಗ್ಗೆ ಯಾವುದೇ ಕ್ರಮ ಜರುಗಿಸದೇ ಇರುವುದು ಸ್ಪಷ್ಟ ಪಡುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕಿನ ಉಪ್ಪೂರು ಗ್ರಾಮದ ಸರ್ವೇ ನಂ.318/8ರಲ್ಲಿ ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ಎಷ್ಟು ಸರ್ಕಾರಿ ರಸ್ತೆಯ ಜಾಗವನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟಿರುತ್ತಾರೆ ಎಂಬ ಬಗೆಗಿನ ಅಂಶವನ್ನು ಸರ್ವೇ ಕಾರ್ಯನಿರ್ವಹಿಸಿ ದೃಢಪಡಿಸಿಕೊಂಡು, ಸದರಿ ಅತಿಕ್ರಮಿಸಿ ಕಟ್ಟಿರುವ ಆವರಣ ಗೋಡೆಯ ಭಾಗವನ್ನು ತೆರವುಗೊಳಿಸಲು ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 21/01/2017.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

21/01/17